"ಮಧುರ ಮಕ್ಕಳೇ - ತಂದೆಯ ಸಹಯೋಗಿಗಳಾಗಿ ಎಲ್ಲರಿಗೂ ಹೊಸ ಪ್ರಪಂಚದ ಪುರುಷಾರ್ಥ ಮಾಡಿಸಿ - ಹೇಗೆ ಸ್ವಯಂ ಜ್ಞಾನಪೂರ್ಣರಾಗಿದ್ದೀರೋ, ಅದೇ ರೀತಿ ಅನ್ಯರನ್ನು ಮಾಡಿರಿ"

ಪ್ರಶ್ನೆ: ನೀವು ಮಕ್ಕಳಿಗೆ ಈಗ ಯಾವ ಸ್ಮೃತಿ ಇರಬೇಕು? ಸ್ಮೃತಿಯ ಕಮಾಲ್ ಏನಾಗಿದೆ?

ಉತ್ತರ: ನಿಮಗೆ ಈಗ ಬೀಜ ಹಾಗೂ ವೃಕ್ಷದ ಯಾವ ಜ್ಞಾನ ಸಿಕ್ಕಿದೆಯೋ, ಅದೇ ಜ್ಞಾನದ ಸ್ಮೃತಿಯಲ್ಲಿರಬೇಕು. ಈ ಸ್ಮೃತಿಯಿಂದ ನೀವು ಚಕ್ರವರ್ತಿ ರಾಜರಾಗಿ ಬಿಡುತ್ತೀರಿ - ಇದೇ ಸ್ಮೃತಿಯ ಕಮಾಲ್ ಆಗಿದೆ. ತಂದೆ ಮಕ್ಕಳಿಗೆ ಸ್ಮೃತಿ ತರಿಸುತ್ತಾರೆ - ಮಕ್ಕಳೇ ನಿಮಗೆ ನೆನಪಿದೆಯೇ ನೀವು ಅರ್ಧ ಕಲ್ಪ ಬಹಳ ಭಕ್ತಿ ಮಾಡಿದಿರಿ. ಈಗ ನಾನು ನಿಮ್ಮಗೆ ಭಕ್ತಿಯ ಫಲವನ್ನು ಕೊಡಲು ಬಂದಿದ್ದೇನೆ. ನೀವು ಮತ್ತೆ ವೈಕುಂಠದ ಮಾಲೀಕರಾಗುತ್ತೀರಿ. ಹೇಗೆ ತಂದೆ ಮಧುರರಾಗಿದ್ದಾರೆ - ಅದೇ ರೀತಿ ತಂದೆಯ ಜ್ಞಾನವು ಮಧುರವಾಗಿದೆ. ಅದರ ಸ್ಮರಣೆ ಮಾಡುತ್ತಾ ಸ್ಮರಿಸಿ-ಸ್ಮರಿಸಿ ಸುಖ ಪಡೆಯಬೇಕು.

ಗೀತೆ: ಎದ್ದೇಳಿ ಪ್ರಿಯತಮೆಯರೇ ಎದ್ದೇಳಿ.......

ಓಂ ಶಾಂತಿ....ಮಧುರ ಮಧುರ ಮಕ್ಕಳು ಗೀತೆಯನ್ನು ಕೇಳಿದರು ಇವತ್ತು ದೀಪಾವಳಿಯಾಗಿದೆ. ದೀಪಾವಳಿಯೆಂದು ಹೇಳಲಾಗುತ್ತದೆ ಹೊಸಯುಗಕ್ಕೆ. ಸತ್ಯ ಯುಗದಲ್ಲಿ ಯಾವುದೇ ದೀಪಾವಳಿಯನ್ನು ಆಚರಿಸಲಾಗುವುದಿಲ್ಲ. ಏಕೆಂದರೆ ಅಲ್ಲಿ ಎಲ್ಲರ ಆತ್ಮ ರೂಪಿ ಜ್ಯೋತಿ ಬೆಳಗಿರುತ್ತದೆ. ಮಕ್ಕಳು ತಿಳಿದುಕೊಂಡಿದ್ದಾರೆ - ಹೊಸ ಪ್ರಪಂಚದಲ್ಲಿ ರಾಜ್ಯ ಭಾಗ್ಯವನ್ನು ಪಡೆದುಕೊಳ್ಳುವ ಪುರುಷಾರ್ಥ ಮಾಡುತ್ತೀದ್ದೇವೆ ಶ್ರೀಮತದ ಮೇಲೆ. ನೀವು ಈಗ ತ್ರಿಕಾಲದರ್ಶಿಯಾಗಿದ್ದೀರಿ. ಯಾರು ಪಾಸ್ಟ್ ಪ್ರಸೆಂಟ್ ಫ್ಯೂಚರ್ ಅನ್ನು ತಿಳಿದುಕೊಂಡಿರುತ್ತಾರೋ ಅವರನ್ನೇ ತ್ರಿಕಾಲದರ್ಶಿ ಎಂದು ಹೇಳಲಾಗುತ್ತದೆ. ನಿಮಗೆ ಈಗ 3 ಕಾಲಗಳ ಜ್ಞಾನವಿದೆ. ಹಾಗಾದರೆ ನೀವು ಅನ್ಯರಿಗೆ ತಿಳಿಸಬೇಕು. ಸ್ವಯಂ ಸಹ ಮುಳ್ಳಿನಿಂದ ಹೂವಾಗುತ್ತೀರಿ ಹಾಗೂ ಅನ್ಯರನ್ನು ಮಾಡಬೇಕು. ಪಾಸ್ಟ್ ನ ಹಿಸ್ಟರಿ ಜಿಯೋಗ್ರಫಿಯನ್ನು ತಿಳಿಯುವುದರಿಂದ ಫ್ಯೂಚರ್ ಏನಾಗಲಿದೆ ಎನ್ನುವುದನ್ನು ಸಹ ತಿಳಿದುಕೊಂಡು ಬಿಡುತ್ತೀರಿ. ಯಾರು ಫ್ಯೂಚರ್ ಅನ್ನು ತಿಳಿದುಕೊಳ್ಳುತ್ತಾರೆ ಅವರು ಪಾಸ್ಟ್, ಪ್ರಸೆಂಟ್ ಅನ್ನು ಸಹ ತಿಳಿದು ಕೊಳ್ಳುತ್ತಾರೆ ಇಂತಹವರಿಗೆ ಹೇಳಲಾಗುತ್ತದೆ ನಾಲೆಜ್ ಫುಲ್. ಪಾಸ್ಟ್ ಆಗಿತ್ತು ಕಲಿಯುಗ, ಪ್ರಸೆಂಟ್ ಆಗಿದೆ ಸಂಗಮಯುಗ, ಹಾಗೂ ಫ್ಯೂಚರ್ ಸತ್ಯಯುಗ ತ್ರೇತಾಯುಗ ಬರಲಿದೆ. ಹಾಗಾದರೆ ನೀವು ಮಕ್ಕಳು ಈ ಚಕ್ರವನ್ನು ತಿಳಿದುಕೊಂಡು ಬಿಟ್ಟಿದ್ದೀರಿ ಹಾಗು ಹೊಸ ಪ್ರಪಂಚಕ್ಕೆ ಹೋಗಲು ಪುರುಷಾರ್ಥ ಮಾಡುತ್ತೀದ್ದಿರಿ ಹಾಗೂ ಅನ್ಯರಿಂದಲೂ ಪುರುಷಾರ್ಥ ಮಾಡಿಸುವುದರಲ್ಲಿ ವ್ಯಸ್ತರಾಗಿದ್ದೀರಿ. ಬಾಬಾರವರ ಸಹಯೋಗಿಯಾಗಿದ್ದೀರಿ. ಬಾಬಾರವರು ಅಗಲಿ ಹೋಗಿ ಮತ್ತೆ ಸಿಕ್ಕಿರುವ ಹಾಗೂ ನೀವು ಸಹ ಅಗಲಿ ಹೋಗಿ ಸಿಕ್ಕಿರುವವರು. ಏಕೆಂದರೆ 5000 ವರ್ಷಗಳ ನಂತರ ಸಿಕ್ಕಿದ್ದೀರಿ ಎಂದ ಮೇಲೆ ತಂದೆ ಬಂದಿದ್ದಾರೆ ಪ್ರಿಯತಮೆಯರನ್ನು ಶೃಂಗಾರ ಮಾಡಿ ಹೊಸ ಪ್ರಪಂಚಕ್ಕೆ ಕರೆದೊಯ್ಯಲು. ಮಕ್ಕಳ ಬುದ್ಧಿಯಲ್ಲಿ ಮೇಲಿನಿಂದ ಹಿಡಿದು ಮೂಲವತನ, ಸೂಕ್ಷ್ಮವತನದ ಜ್ಞಾನವಿದೆ. ಮಕ್ಕಳು ತಿಳಿದುಕೊಂಡಿದ್ದಾರೆ ಯಾವ-ಯಾವ ಧರ್ಮ ಸ್ಥಾಪಕರು ಯಾವಾಗ ಹಾಗೂ ಹೇಗೆ ಮೇಲಿನಿಂದ ಬಂದು ಧರ್ಮ ಸ್ಥಾಪನೆ ಮಾಡುತ್ತಾರೆ. ಬಾಬಾರವರು ನಿಮ್ಮನ್ನುಜ್ಞಾನಪೂರ್ಣರನ್ನಾಗಿ ಮಾಡಿದ್ದಾರೆ. ಅವರನ್ನು ಮೋಸ್ಟ್ ಬಿಲವೆಡ್ ಎಂದು ಹೇಳಲಾಗುತ್ತದೆ. ಮಧುರಾತಿ ಮಧುರರಾಗಿದ್ದಾರೆ. ನೀವು ತಿಳಿದುಕೊಂಡಿದ್ದೀರಿ. ಎಷ್ಟು ಮಧುರರಾಗಿದ್ದಾರೆ ಅವರ ಮಹಿಮೆ ಅಪರಮಪಾರವಾಗಿದೆ. ಅಂದ ಮೇಲೆ ಅವರ ಆಸ್ತಿಯ ಮಹಿಮೆಯು ಅಪರಮಪಾರವಾಗಿದೆ. ಹೆಸರೇ ಸ್ವರ್ಗವಾಗಿದೆ, ಹೆವನ್, ಪ್ಯಾರಡೈಸ್, ಬಹಿಶ್ತ್. ಪರಮಾತ್ಮನನ್ನು ಗಾಡ್ ಫಾದರ್ ಎಂದು ಹೇಳಲಾಗುತ್ತದೆ, ದುಃಖಹರ್ತ-ಸುಖಕರ್ತ ಎಂದ ಮೇಲೆ ಅವರನ್ನು ಎಷ್ಟು ನೆನಪು ಮಾಡಬೇಕು. ಆದರೆ ಡ್ರಾಮಾದ ಅನುಸಾರ ನೆನಪು ಬರುವುದಿಲ್ಲ. ಈ ಗೀತೆ ಎಷ್ಟು ಚೆನ್ನಾಗಿದೆ. ಮನೆಯಲ್ಲಿ 3-4 ಹಾಡುಗಳನ್ನು ಅವಶ್ಯವಾಗಿ ಇಟ್ಟುಕೊಳ್ಳಬೇಕು. ಈ ಹಾಡುಗಳು ಸಹ ತಂದೆಯ ನೆನಪು ತರಿಸುತ್ತದೆ. ಬ್ರಾಹ್ಮಣರೇ ತಿಳಿದುಕೊಂಡಿದ್ದಾರೆ - ಈ ಹೊಸ ದೈವೀ ಪ್ರಪಂಚ ಸ್ವರಾಜ್ಯ ಅರ್ಥಾತ್ ಆತ್ಮರಿಗೆ ಈಗ ರಾಜ್ಯ ಸಿಗುತ್ತಿದೆ ಆದರೆ ತಂದೆಯ ಮೂಲಕ ಯಾವ ಆಸ್ತಿ ಸಿಗುತ್ತದೆಯೋ ಅದಕ್ಕೆ ಇದು ಪರಮಾತ್ಮನ ಮೂಲಕ ಸಿಕ್ಕಿದೆಯೆಂದು ಹೇಳುವುದಿಲ್ಲ. ನೀವು ತಿಳಿದುಕೊಂಡಿದ್ದೀರಿ ತಂದೆಯಿಂದ ರಾಜ್ಯ ಪಡೆದುಕೊಂಡೆವು, ನಂತರ ಕಳೆದುಕೊಂಡೆವು. ಈಗ ಮತ್ತೆ ತೆಗೆದುಕೊಳ್ಳುತ್ತಿದ್ದೇವೆ. ಸತ್ಯಯುಗದಲ್ಲಿ ಪಾವನರಾಗಿದ್ದೆವು ಮತ್ತೆ ನಂತರ ಪತಿತರಾದೆವು. ಗಾಯನ ಸಹ ಮಾಡುತ್ತಾರೆ ಶ್ಯಾಮ ಸುಂದರ ಎಂದು. ಶ್ಯಾಮರಿದ್ದವರು ಈಗ ಸುಂದರರಾಗಲು ಸದ್ಗುರು ಸಿಕ್ಕಿದ್ದಾರೆ ಈಗ ಸದ್ಗುರು ಹಾಗೂ ಗೋವಿಂದ ಇಬ್ಬರು ನಿಂತಿದ್ದಾರೆ. ನಂತರ ಹೇಳುತ್ತಾರೆ ಬಲಿಹಾರಿತನ ನಿಮ್ಮದು.....ನೀವು ಶ್ರೀ ಕೃಷ್ಣರಾಗುತ್ತಿದ್ದೀರಿ. ಬಲಿಹಾರಿ ನೀವು ಮಕ್ಕಳದ್ದಾಗಿದೆ - ನೀವು ಈ ರೀತಿಯಾಗುತ್ತಿದ್ದೀರಿ ಅವರಂತು ಹೇಳಿ ಬಿಡುತ್ತಾರೆ ಶ್ರೀ ಕೃಷ್ಣ ಗೋವುಗಳನ್ನು ಮೇಯಿಸುತ್ತಿದ್ದ ಎಂದು ನಂತರ ಬ್ರಹ್ಮನಿಗಾಗಿ ಹೇಳುತ್ತಾರೆ ಅವರ ಗೋಶಾಲೆ ಇತ್ತು ಎಂದು ಹಾಗಾದರೆ ಗೋ ಶಾಲ ಕೃಷ್ಣನದ್ದು ಇಲ್ಲ, ಬ್ರಹ್ಮನದ್ದು ಇಲ್ಲ. ಗೋ ಶಾಲೆ

ಶಿವಬಾಬಾರವರದ್ದಾಗಿದೆ.

ಈಗ ನೀವು ಮಕ್ಕಳು ಹಬ್ಬಗಳ ರಹಸ್ಯವನ್ನು ತಿಳಿದುಕೊಂಡಿದ್ದೀರಿ. ನೀವು ತಿಳಿದುಕೊಂಡಿದ್ದೀರಿ. ಸತ್ಯಯುಗದಲ್ಲಿ ದೀಪಾವಳಿ ಆಗುತ್ತದೆ. ಅಲ್ಲಿ ಜ್ಯೋತಿ ಬೆಳಗಿರುತ್ತದೆ. ನಿಮ್ಮದು 21 ಜನ್ಮದ ದೀಪಾವಳಿ ಆಗಿದೆ. ಇಲ್ಲಂತೂ ವರ್ಷ ವರ್ಷ ಆಚರಿಸುತ್ತಾರೆ. ಇವತ್ತು ಆಚರಿಸಿದರೆ, ನಾಳೆ ದೀಪ ಆರಿ ಹೋಗುತ್ತದೆ. ಒಂದು ವೇಳೆ ಸತ್ಯಯುಗದಲ್ಲಿ ಪಟ್ಟಾಭಿಷೇಕವಾದರೆ ಪಟಾಕಿ ಹೊಡೆಯುತ್ತಾರೆ. ಇಲ್ಲಂತೂ 5 ಕಾಸಿನ ಪಟಾಕಿಯನ್ನು ಆಡುತ್ತಾರೆ, ಯಾವುದರಿಂದ ಕೆಲವು ಬಾರಿ ಆಕ್ಸಿಡೆಂಟ್ ಆಗಿ ಹೋಗುತ್ತದೆ. ಅಲ್ಲಂತೂ ದೊಡ್ಡ ಪಟ್ಟಾಭಿಷೇಕವಾಗುತ್ತದೆ. ಇಲ್ಲಿ ರಾಜಾಯಿ ಸಿಗುತ್ತದೆ ಎಂದರೆ ವರ್ಷ ವರ್ಷ ಆಚರಿಸುತ್ತಾರೆ. ಆದರೆ ಈ ರಾಜಾಯಿಯಲ್ಲಿ ಸುಖವಿಲ್ಲ. ಇದಾಗಿದೆ ಭ್ರಷ್ಟಾಚಾರಿ ಪ್ರಪಂಚ, ಅದಾಗಿದೆ ಶ್ರೇಷ್ಠಾಚಾರಿ ಪ್ರಪಂಚ. ಬಾಬಾರವರು ಹೇಳುತ್ತಾರೆ ನೋಡಿ ನಿಮಗೆ ಎಷ್ಟು ಬುದ್ಧಿವಂತರನ್ನಾಗಿ ಮಾಡುತ್ತೇವೆ. ಬಾಬಾರವರಿಗೆ ಹೇಳಲಾಗುತ್ತದೆ ತ್ರಿಲೋಕಿನಾಥ. ತ್ರಿಲೋಕದ ಮಾಲೀಕರಾಗುವುದಿಲ್ಲ. ಅವರಲ್ಲಿ ಜ್ಞಾನವಿದೆ. ನಿಮ್ಮನ್ನು ವೈಕುಂಠದ ಮಾಲೀಕರನ್ನಾಗಿ ಮಾಡುತ್ತಾರೆ. ನಿಮಗೆ ಎಷ್ಟು ಖುಷಿಯಿರಬೇಕು. ಅರ್ಧ ಕಲ್ಪ ನೀವು ಭಕ್ತಿ ಮಾಡಿದಿರಿ, ಈಗ ತಂದೆ ಸಿಕ್ಕಿದ್ದಾರೆ ತಂದೆಯವರು ಈಗ ಸ್ಮೃತಿ ತರಿಸುತ್ತಾರೆ, ಹೇಳುತ್ತಾರೆ, ಸ್ಮರಣೆ ಮಾಡಿ.....ಯಾರನ್ನು? ತಂದೆಯನ್ನು, ತಂದೆಯ ರಚನೆಯ ಜ್ಞಾನವನ್ನು. ಬೀಜವನ್ನು ಹಾಗೂ ವೃಕ್ಷವನ್ನು. ಈ ಸ್ಮೃತಿಯಿಂದ ನೀವು ಚಕ್ರವರ್ತಿ ರಾಜರಾಗುತ್ತೀರಿ.

ನೋಡಿ ಸ್ಮೃತಿಯ ಕಮಾಲ್, ಹೇಗಿದ್ದಿದ್ದು ಹೇಗೆ ಮಾಡಿಬಿಡುವುದು ಇದಕ್ಕೆ ಹೇಳಲಾಗುತ್ತದೆ ಆಧ್ಯಾತಿಕ ಜ್ಞಾನ. ಆತ್ಮದ ತಂದೆ ಜ್ಞಾನವನ್ನೇ ತಿಳಿಸುತ್ತಾರೆ. ಗೀತೆಯಲ್ಲಿ ಕೃಷ್ಣನ ಹೆಸರು ಹಾಕಿ ಬಿಟ್ಟಿದ್ದಾರೆ. ಆದರೆ ತಂದೆ ನಿವi ಗೆ ಜ್ಞಾನವನ್ನು ಕೊಟ್ಟು ತನಗಿಂತಲೂ ಶ್ರೇಷ್ಠರನ್ನಾಗಿ ಮಾಡುತ್ತಾರೆ. ನೀವು ವೈಕುಂಠದ ಮಾಲಿಕರಾಗುತ್ತೀರಿ. ಹೇಗೆ ಆ ವಿದ್ಯೆಯನ್ನು ಓದಿದರೆ ಬುದ್ಧಿಯಲ್ಲಿ ಇರುತ್ತದೆ ನಾವು ಪದವೀಧರರಾಗುತ್ತೇವೆ ಎಂದು ನೀವು ತಿಳಿದುಕೊಂಡಿದ್ದೀರಿ ನಾವು ಬೆಗ್ಗರ್ ಇಂದ ಪ್ರಿನ್ಸ್ ಆಗುತ್ತೇವೆ. ನಂತರ ಮಹಾರಾಜ ಆಗುತ್ತೇವೆ ಈ ತಂದೆ, ಟೀಚರ್ ರೂಪದಲ್ಲಿ ಓದಿಸುತ್ತಿದ್ದಾರೆ ಲೌಕಿಕದಲ್ಲಿ ಮಕ್ಕಳು 5 ವರ್ಷ ತಂದೆಯ ಜೊತೆ ಇರುತ್ತಾರೆ ನಂತರ ಶಿಕ್ಷಕರ ಹತ್ತಿರ ಹೋಗುತ್ತಾರೆ, ವಯಸ್ಸಾದ ಮೇಲೆ ಮತ್ತೆ ಗುರು ಮಾಡುತ್ತಾರೆ. ಇಲ್ಲಂತೂ ತಂದೆಯವರಾದ ಮೇಲೆ ತಂದೆ, ಟೀಚರ್ ರೂಪದಲ್ಲಿ ಶಿಕ್ಷಣವನ್ನು ಕೊಡುತ್ತಾರೆ ಹಾಗೂ ಸದ್ಗತಿಗಾಗಿ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ ಆ ಗುರು ಜೊತೆಯಲ್ಲಿ ಕರೆದುಕೊಂಡು ಹೋಗುವುದಿಲ್ಲ. ಸ್ವಯಂ ಮುಕ್ತಿಯಲ್ಲಿಯೂ ಹೋಗುವುದಿಲ್ಲ. ಅವರು ಯಾತ್ರೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ನೀವು ಸಹ ಮಾರ್ಗದರ್ಶಕರು ಅವರೂ ಸಹ ಮಾರ್ಗದರ್ಶಕರು ಆದರೆ ಅದು ಟಿಕ್ಕರ್ ಟೋಬರ್ (ಮುಳ್ಳು) ನ ಯಾತ್ರೆಯಾಗಿದೆ. ಈ ಜ್ಞಾನ ನಿಮಗಿದೆ. ನಿಮಗೆ ಖುಷಿಯಿರಬೇಕಾಗಿದೆ. ಇದು ಸ್ಟೂಡೆಂಟ್ ಲೈಫ್ ಆಗಿದೆಯೆಂದು ಏಕೆ ಮರೆಯಬೇಕು. ಆದರೆ ಮಾಯೆ ಈ ಖುಷಿ ಇರಲು ಬಿಡುವುದಿಲ್ಲ. ಏಕೆಂದರೆ ಕರ್ಮಾತೀತ ಅವಸ್ಥೆ ಅಂತ್ಯದಲ್ಲಿ ಬರಬೇಕಾಗಿದೆ. ಹೇಳಿದ್ದಾರಲ್ಲವೇ ಸ್ಮೃತಿರ್ಲಬ್ಧ. ಸ್ಮರಿಸಿ ಸ್ಮರಿಸಿ ಸುಖ ಪಡೆಯಿರಿ, ಅಲ್ಲಿ ಕ್ಲೇಶಗಳು ಇರುವುದಿಲ್ಲ. ಹೇಳಲಾಗುತ್ತದೆ ಜೀವನ್ಮುಕ್ತಿ ಹೇಗೆ ತಂದೆ ಮಧುರರಾಗಿದ್ದಾರೋ ಹಾಗೆಯೇ ಅವರ ಜ್ಞಾನವು ಮಧುರವಾಗಿದೆ. ಬಾಬಾರವರ ಮಹಿಮೆ ಅಪರಮಪಾರವಾಗಿದೆ ಅರ್ಥಾತ್ ಕೊನೆಯಿಲ್ಲದಂತಹದ್ದಾಗಿದೆ. ಇದು ಭಕ್ತಿಯಲ್ಲಿ ಹೇಳಲಾಗುತ್ತದೆ ಆದರೆ ನೀವು ಈ ರೀತಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ನಿಮಗೆ ಎಲ್ಲಾ ಜ್ಞಾನವು ಸಿಕ್ಕಿದೆ. ನಿಮಗೆ ಬಹಳ ಮಧುರರಾಗಬೇಕಾಗಿದೆ. ತನ್ನನ್ನು ತಾನು ನೋಡಿಕೊಳ್ಳಿ ಯಾವುದೇ ವಿಕಾರವಿಲ್ಲವೇ? ಯಾರದ್ದೇ ಅವಗುಣವನ್ನಂತೂ ನೋಡುವುದಿಲ್ಲ ಅಲ್ಲವೇ? ಬಹಳ ಮಧುರ ದೃಷ್ಟಿ ಇಡಬೇಕಾಗಿದೆ. ಬಾಬಾರವರಿಗೆ ಎಷ್ಟು ಮಕ್ಕಳಿದ್ದಾರೆ ಎಲ್ಲರ ಮೇಲೂ ಮಧುರ ದೃಷ್ಟಿ ಇದೆಯಲ್ಲವೇ. ನಿಮಗೂ ಈ ರೀತಿ ದೃಷ್ಟಿ ಇಡಬೇಕು. ಮನುಷ್ಯರು ಇದನ್ನು ತಿಳಿದುಕೊಂಡಿಲ್ಲ - ರಾಧೆ-ಕೃಷ್ಣ, ಲಕ್ಷ್ಮಿ-ನಾರಾಯಣರ ಸಂಬಂಧ ಏನಾಗಿದೆ ಎಂದು ಆದ್ದರಿಂದ ಚಿತ್ರವನ್ನು ಮಾಡಿದ್ದಾರೆ. ಚಿಕ್ಕಂದಿನಲ್ಲಿ ರಾಧಾ-ಕೃಷ್ಣ ಸ್ವಯಂ ವರದ ನಂತರ ಲಕ್ಷ್ಮಿ-ನಾರಾಯಣರಾಗುತ್ತಾರೆ. ತಂದೆ ಬಂದು ಸ್ಮೃತಿ ತರಿಸುತ್ತಾರೆ - ಮಕ್ಕಳೇ ನೀವು ದೇವತೆಯರಾಗಿದ್ದಿರಿ. ಮಕ್ಕಳು ಹೇಳುತ್ತಾರೆ ಖಂಡಿತವಾಗಿಯೂ. ಹೇಳುತ್ತಾರೆ ಬ್ರಾಹ್ಮಣ ದೇವಿ ದೇವತಾಯೇ ನಮಃ, ಬ್ರಾಹ್ಮಣ ಜನರು ಎಂದು ಹೇಳುತ್ತಾರೆ ಆದರೆ ಬ್ರಾಹ್ಮಣ ದೇವತೆ ಕ್ಷತ್ರಿಯ ಧರ್ಮದ ಸ್ಥಾಪನೆ ಯಾರು ಮಾಡಿದರು ಅಂದ ಮೇಲೆ ಬ್ರಾಹ್ಮಣರ ತಂದೆಯಾಗಿದ್ದಾರೆ ಬ್ರಹ್ಮಾ ಹಾಗು ಶಿವ. ತಂದೆ ಸಾಧಾರಣ ರೂಪದಲ್ಲಿ ಬರುತ್ತಾರೆ ಈ ರಥ ನಿಗಧಿಯಾಗಿದೆ, ಭಾಗ್ಯಶಾಲಿ ರಥವಾಗಿದೆ.

ಮನುಷ್ಯ ದೀಪಾವಳಿಯ ದಿನ ಲಕ್ಷ್ಮಿಯಿಂದ ಹಣವನ್ನು ಬೇಡುವುದಕ್ಕಾಗಿ ಆಹ್ವಾನ ಮಾಡುತ್ತಾರೆ. ಮೊದಲು ನೀವು ಬೇಡುತ್ತಿದ್ದಿರಿ ಈಗ ನೀವು ಲಕ್ಷ್ಮಿ ನಾರಾಯಣರಾಗುತ್ತಿದ್ದೀರಿ. ಇಲ್ಲಿಯಂತೂ ಭಿಕ್ಷೆ ಬೇಡುತ್ತಲೇ ಇರುತ್ತಾರೆ. ಕಿರುಚಾಡುತ್ತಾ ಇರುತ್ತಾರೆ. ಪುತ್ರನನ್ನು ಕೊಡಿ, ಧನವನ್ನು ಕೊಡಿ. ಸದ್ಗತಿಯಲ್ಲಿ ಈ ರೀತಿ ಬೇಡುವುದಿಲ್ಲ. ಶಿವಬಾಬಾರವರು ಮಕ್ಕಳ ಎಲ್ಲಾ ಭಂಡಾರವನ್ನು ಭರ್ಪೂರ್ ಮಾಡಿ ಬಿಡುತ್ತಾರೆ. ತಂದೆಯಂತು ಸ್ವರ್ಗವನ್ನು ರಚಿಸುತ್ತಾರೆ, ನರಕವನ್ನಂತೂ ರಚಿಸುವುದಿಲ್ಲ. ಈಗ ನರಕದಲ್ಲಿ ಬಾಬಾರವರು ಬಂದಿದ್ದಾರೆ ಸ್ವರ್ಗವಾಸಿಯನ್ನಾಗಿ ಮಾಡಲು. ಎಲ್ಲರೂ ಪತಿತರಾಗಿದ್ದಾರೆ. ನಾವು ನರಕವಾಸಿಯಾಗಿದ್ದೇವೆ ಎಂದು ತಿಳಿದುಕೊಂಡಿಲ್ಲ. ಯಾರು ಸ್ವರ್ಗವಾಸಿಗಳಾಗಿದ್ದರೋ ಅವರು ಈಗ ನರಕವಾಸಿಗಳಾಗಿದ್ದಾರೆ. ಈಗ ಮತ್ತೆ ಸ್ವರ್ಗವಾಸಿಗಳಾಗುತ್ತಿದ್ದಾರೆ. ಶಿವಬಾಬಾರವರ ಅಕಾಲತಕ್ತ ಈ ಬ್ರಹ್ಮಾ ಆಗಿದ್ದಾರೆ. ಯಾವುದರ ಮೇಲೆ ಅಕಾಲಮೂರ್ತ

ಪರಮಾತ್ಮ ಬಂದು ಕುಳಿತುಕೊಳ್ಳುತ್ತಾರೆ. ಆತ್ಮವು ಅಕಾಲಮೂರ್ತವಾಗಿದೆ. ಆತ್ಮದ ತಕ್ತ ಈ ಭೃಕುಟಿಯಾಗಿದೆ. ಚಿಹ್ನೆಯನ್ನು ತೋರಿಸುತ್ತಾರೆ ಮಸ್ತಕದ ಮೇಲೆ ತಿಲಕವನ್ನು ಇಡುತ್ತಾರೆ, ಇತ್ತೀಚೆಗೆ ಎತ್ತಿಗೂ ತಿಲಕವನ್ನು ಇಡುತ್ತಾರೆ ಹಾಗಾದರೆ ಇದು ಭೃಕುಟಿ ಬ್ರಹ್ಮಾ ಹಾಗೂ ಶಿವಬಾಬಾ ಇಬ್ಬರ ತಕ್ತವಾಗಿದೆ. ಹಾಗಾದರೆ ನಾನು ಬಂದು ಜ್ಞಾನವನ್ನು ಕೊಡುತ್ತೇನೆ, ಜ್ಞಾನಪೂರ್ಣನಾಗಿದ್ದೇನೆ. ನಾನು ಎಲ್ಲರ ಹೃದಯವನ್ನು ತಿಳಿದುಕೊಂಡಿಲ್ಲ, ಥಾಟ್ ರೀಡರ್ ಆಗಿಲ್ಲ. ಹಾ ಹೃದಯದ ಮಾಲೀಕ ಎಂದು ಹೇಳಬಹುದು. ಏಕೆಂದರೆ ಆತ್ಮಕ್ಕೆ ಹೃದಯ ಎಂದು ಹೇಳಲಾಗುತ್ತದೆ. ಹಾಗಾದರೆ ಆತ್ಮದ ಮಾಲೀಕನಾಗಿದ್ದೇನೆ, ಶರೀರದ ಮಾಲೀಕನಲ್ಲ. ಈ ರೀತಿ ಸಾಧು ಜನ ಹೇಳುತ್ತಾರಲ್ಲವೇ - ನಾನು ಮಾಲೀಕ. ಹಾಗಾದರೆ ನಾನು ಅವಿನಾಶಿ ಆತ್ಮದ ಮಾಲೀಕನಾಗಿದ್ದೇನೆ. ಏಕೆಂದರೆ ನಾನು ಸ್ವಯಂ ಅವಿನಾಶಿ ಆಗಿದ್ದೇನೆ. ನೀವು ವಿನಾಶಿ ವಸ್ತುಗಳ ಮಾಲೀಕರಾಗುತ್ತೀರಿ. ಏಕೆಂದರೆ ನೀವು ಒಂದು ವಿನಾಶಿ ಶರೀರವನ್ನು ಬಿಟ್ಟು ಬೇರೆ ಶರೀರವನ್ನು ತೆಗೆದುಕೊಳ್ಳುತ್ತೀರಿ. ನೀವು ಈಗ ವೈಕುಂಠಕ್ಕೆ ಹೋಗುತ್ತೀರಿ, ಆದ್ದರಿಂದ ವಿದ್ಯೆಯನ್ನು ಓದುತ್ತಿದ್ದೀರಿ. ಹೇಳುತ್ತಾರಲ್ಲವೇ - ಎಲ್ಲಿಯವರೆಗೆ ಜೀವಿಸಿದ್ದೀವೋ ಅಲ್ಲಿಯವರೆಗೂ ಕುಡಿಯಬೇಕು. ಯಾವಾಗ ಓದು ಪೂರ್ಣವಾಗಿ ಬಿಡುತ್ತದೆಯೋ ಆಗ ಈ ಶರೀರವೇ ಬಿಟ್ಟು ಹೋಗುತ್ತೇವೆ. ಹೇಳುತ್ತಾರೆ - ಪರಮಾತ್ಮನಿಗೆ ಸಂಕಲ್ಪ ಬಂತು. ಸೃಷ್ಠಿ ರಚನೆ ಮಾಡಬೇಕೆಂದು. ಯಾವಾಗ ಸಮಯವಿರುತ್ತದೆಯೋ ಆಗಲೇ ಆಕ್ಟ್ ಮಾಡಲು ವಿಚಾರ ಬರುವುದು ಹಾಗೂ ಬಂದು ಪಾರ್ಟ್ ಮಾಡುತ್ತಾರೆ. ತಂದೆ ಹೇಳುತ್ತಾರೆ ಹೇಗೆ ನೀವು ಪಾರ್ಟ್ ನಡೆಸುತ್ತೀರಿ ಹಾಗೆಯೇ ನಾನೂ ಸಹ ನಡೆಸುತ್ತೇನೆ. ಬಾಕಿ ನಾನು ಜನನ ಮರಣದಲ್ಲಿ ಬರುವುದಿಲ್ಲ ಆದ್ದರಿಂದ ನನ್ನ ಮಹಿಮೆ ಎಷ್ಟೊಂದು ಇದೆ. ವೈಕುಂಠದ ಮಹಿಮೆಯು ಇದೆ. ಸನ್ಯಾಸಿಗಳಿಗೆ ಸತ್ಯಯುಗದ ಸುಖವು ತಿಳಿದಿಲ್ಲ. ಅಲ್ಲಿನ ಸುಖ ಅವರಿಗೆ ಸಿಗುವುದೇ ಇಲ್ಲ. ಸತ್ಯಯುಗಕ್ಕಾಗಿ ಅವರು ಕೇಳಿದ್ದಾರೆ ಅಲ್ಲಿ ಕಂಸನಿದ್ದ ಎಂದು ಹಾಗಾದರೆ ಅವರು ತಿಳಿದುಕೊಳ್ಳುತ್ತಾರೆ ಅಲ್ಲೂ ಸುಖವಿರಲಿಲ್ಲವೆಂದು. ಹಾಗಾದರೆ ಅನ್ಯರಿಗೂ ಹೇಳುತ್ತಾರೆ ಕಾಗವಿಷ್ಟ ಸಮಾನ ಸುಖವಾಗಿದೆ. ಹಾಗಾದರೆ ಇದನ್ನು ಹೇಳಿ ಅನ್ಯರನ್ನು ಸನ್ಯಾಸಿಯನ್ನಾಗಿ ಮಾಡುತ್ತಾರೆ ನೀವು ಮಕ್ಕಳಂತು ಸ್ವರ್ಗದ ಸುಖವನ್ನು ಪಡೆದುಕೊಳ್ಳುತ್ತೀರಿ. ಇದಂತು ಅಂತಿಮ ಜನ್ಮವಾಗಿದೆ. ಎಲ್ಲರೂ ಸಾಯುತ್ತಾರೆ. ನಾನು ಬಂದಿರುವುದೇ ನಿಮ್ಮನು ಕರೆದೊಯ್ಯುವುದಕ್ಕಾಗಿ ಎಂದಮೇಲೆ ನೀವೇಕೆ ಇಲ್ಲಿಯೇ ಕುಳಿತುಕೊಳ್ಳುತಿರುತ್ತೀರಿ. ಸೊಳ್ಳೆಗಳ ರೀತಿ ಎಲ್ಲರನ್ನೂ ಕರೆದೋಯ್ಯುತ್ತೇನೆ. ಎಂದಮೇಲೇ ಮಮ್ಮಾ ಬಾಬಾರವರ ಸದೃಶ್ಯ ಪುರುಷಾರ್ಥ ಮಾಡಿ ಪದವಿಯನ್ನು ಪಡೆದುಕೊಳ್ಳಬೇಕು. ಬ್ರಹ್ಮಾ ಮುಖವಂಶಾವಳಿ ಆಗಿದ್ದೀರಲ್ಲವೇ.ಎಷ್ಟು ಸತ್ಯ ಯುಗ ತ್ರೇತಾಯುಗದಲ್ಲಿ ದೇವತೆಗಳಿದ್ದರೋ ಅಷ್ಟೇ ಈಗ ಬ್ರಹ್ಮಾ ಮುಖ ವಂಶಾವಳಿಗಳಾಗುತ್ತಾರೆ. ಹಾಗಾದರೆ ಕಾಯಿದೆಯ ಅನುಸಾರ ತಂದೆ ತಾಯಿಯರೂ ಇದ್ದಾರೆ, ಯಾರನ್ನು ನೋಡಿಕೊಳ್ಳಲು ನಿಮಿತ್ತರನ್ನಾಗಿ ಮಾಡಲಾಗುತ್ತದೆ.ಹೊಸ-ಹೊಸ ಮಕ್ಕಳಂತೂ ಬರುತ್ತಲೇ ಇರುತ್ತಾರೆ, ವಿದ್ಯಾಭ್ಯಾಸ ನಡೆಯುತ್ತಲೇ ಇರುತ್ತದೆ. ಬಹಳ ಚೆನ್ನಾಗಿ ಪಾಲನೆ ಮಾಡಬೇಕು. ಅವರು ಬಗವಂತರಾಗಿದ್ದಾರೆ. ನೀವು ಯಾರು ಸೆಂಟರ್ನಲ್ಲಿರುತ್ತೀರೋ ಅವರು ಮಾಲಿಯಾಗಿದ್ದಾರೆ. ಮಾಲಿಯಂತೂ ಸಸಿಗಳ ಸಂಭಾಲನೆ ಮಾಡಬೇಕಾಗಿದೆ. ಯಾವಾಗ ಮಾಲಿಯೇಸರಿಯಾಗಿಲ್ಲವೆಂದಾಗ ಅವರು ಸಸಿಗಳ ಸಂಭಾಲನೆ ಹೇಗೆ ಮಾಡುವರು. ಯಾವ ಮಾಲಿ ಒಳ್ಳೆಯ-ಒಳ್ಳೆಯ ಹೂದೋಟವನ್ನು ಮಾಡುವರೋ, ಅವ್ರನ್ನು ನೋಡಿ ಮಾಲೀಕರು ಬಹಳ ಖುಷಿ ಪಡುತ್ತಾರೆ. ನಂತರ ಮಾಲೀಕ ನೋಡಲು ಹೊಗುತ್ತಾರೆ- ಯಾರು-ಯಾರು ಒಳ್ಳೆಯ ಹೂದೋಟವನ್ನು ಮಾಡಿದ್ದಾರೆಂದು ನೋಡಲು. ನೀವೂ ಸಹ ತಿಳಿದುಕೊಂಡಿದ್ದೀರಿ ಯಾರು-ಯಾರು ಒಳ್ಳೆಯ ಮಾಲಿಯಾಗಿದ್ದಾರೆಂದು. ಯಾರು ಒಳ್ಳೆಯ ಮಾಲಿಯಾಗಿದ್ದಾರೆ ಅವರಿಗೆ ಬಹುಮಾನವೂ ಸಿಗುತ್ತದೆ. ನೀವು ಮಾಲಿಯರ ಸಂಬಳ ಹೆಚ್ಚುತ್ತಾ ಹೋಗುತ್ತದೆ.

ಈಗ ನೀವು ಮಕ್ಕಳಿಗೆ ತಮ್ಮ ಗುರಿಯನ್ನು ನೆನಪಿನಲ್ಲಿಟ್ಟುಕೊಳ್ಳ ಬೇಕು ಏಕೆಂದರೆ ನಿಮಗೆ ಈಗ ಮನೆಗೆ ಹೊರಡ ಬೇಕು, ಎಂದಮೇಲೆ ಮನೆಯನ್ನು ನೆನಪು ಮಾಡಬೇಕು.ನೆನಪು ಮಾಡದೇ ಶಾಂತಿಧಮಕ್ಕೆ ಹೋಗಲು ಸಾಧ್ಯವಿಲ್ಲ. ಇಲ್ಲವಾದಲ್ಲಿ ಬಹಳ ಶಿಕ್ಷೆಗಳನ್ನು ತಿನ್ನಬೇಕಾಗುತ್ತದೆ, ಒಳ್ಳೆಯ ಪದವಿಯೂ ಪಡೆಯಲು ಸಾಧ್ಯವಿಲ್ಲ. ಈ ಸಮಯ ಯಾರು ಸೂಕ್ಷ್ಮ ವತನಕ್ಕೆ ಹೋಗುತ್ತಾರೊ, ಸರ್ವಿಸ್ ಅರ್ಥವಾಗಿ ಹೋಗುತ್ತಾರೆ. ಮೊದಲ ನಂಬರಿನಲ್ಲಿ ಬಾಬಾರವರು ಸರ್ವಿಸ್ ಮಾಡುತ್ತಾರೆ, ಎರಡನೇಯ ನಂಬರ್ ನಲ್ಲಿ ಮಮ್ಮಾ ಏಕೆಂದರೆ ಎರಡನೇಯ ನಂಬರಿನಲ್ಲಿ ಮಮ್ಮಾರವರಿಗೆ ಬರಬೇಕಾಗಿದೆ. ಹಾಗಾದರೆ ನೀವು ಮಕ್ಕಳಿಗೂ ಮಮ್ಮಾ ಬಾಬಾರವರನ್ನು ಅನುಸರಿಸಬೇಕು. ಒಳ್ಳೆಯದು!

ಮಧುರಾತಿ ಮಧುರ ಅಗಲಿಹೋಗಿ ಮರಳಿಸಿಕ್ಕಿರುವ ಮಕ್ಕಳಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ**:**

1. ತಂದೆ ಸಮಾನ ಬಹಳ ಮಧುರರಾಗಬೇಕು. ಎಲ್ಲರನ್ನು ಮಧುರ ದೃಷ್ಟಿಯಿಂದ ನೋಡಬೇಕು. ಯಾರದೇ ಅವಗುಣವನ್ನು ನೋಡಬಾರದು.

2. ಈಶ್ವರೀಯ ವಿಧ್ಯಾರ್ಥಿ ಜೀವನದಲ್ಲಿ ಸದಾ ಖುಷಿಯಲ್ಲಿರಬೇಕು. ಎಲ್ಲಿಯವರೆಗೂ ಬದುಕುತ್ತೇವೆ ವಿದ್ಯೆಯನ್ನು ಪ್ರತಿನಿತ್ಯ ಅವಶ್ಯ

ಓದಬೇಕು.

ವರದಾನ: ಲಗನ್ನ ಅಗ್ನಿ ಮೂಲಕ ಒಂದು ದೀಪದಿಂದ ಅನೇಕ ದೀಪಗಳನ್ನು ಬೆಳಗಿಸಿ ಸತ್ಯ ದೀಪಾವಳಿಯನ್ನು ಆಚರಿಸುವಂತಹ ಕುಲ ದೀಪಕ ಭವ

ನೀವು ಆತ್ಮ ರೂಪಿ ದೀಪಕದ ಲಗನ್ ಒಬ್ಬ ದೀಪರಾಜ ತಂದೆಯ ಜೊತೆ ಜೋಡಿಸುವುದೇ ಸತ್ಯ ದೀಪಾವಳಿಯಾಗಿದೆ.

ಹೇಗೆ ದೀಪಕದಲ್ಲಿ ಅಗ್ನಿಯಿರುತ್ತದೆ ಹಾಗೆಯೇ ನೀವು ದೀಪಕಗಳಲ್ಲಿ ಲಗನ್ನಿನ ಅಗ್ನಿಯಲ್ಲಿ, ಯಾವುದರಿಂದ ಅಜ್ಞಾನತೆಯ ಅಂಧಕಾರ ದೂರವಾಗುತ್ತದೆ. ಮನುಷ್ಯರಂತು ದೀಪವಳಿಯಲ್ಲಿ ಮಣ್ಣಿನ ಸ್ಥೂಲ ದೀಪಕವನ್ನು ಬೆಳಗಿಸುತ್ತಾರೆ, ಆದರೆ ನೀವು ಚೈತನ್ಯ ದೀಪಕ, ಕುಲ ದೀಪಕ ಮತ್ತು ಬಾಪ್ದಾದಾರವರ ಆಶಾ ದೀಪಕರಾಗಿದ್ದೀರಿ. ನಿಮ್ಮ ಏಕರಸ, ಅಟಲ್ ಅಡೋಲ್ವಾಗಿ ಬೆಳಗುವ ದೀಪಕದಿಂದ ಯಾವಾಗ ಅನೇಕ ದೀಪಗಳನ್ನು ಬೆಳಗುವವೋ ಆಗಲೇ ಸತ್ಯ ದೀಪವಳಿಯಾಗುವುದು.

ಸ್ಲೋಗನ್: ಸಮಯದ ಮಹತ್ವವನ್ನು ತಿಳಿದುಕೊಳ್ಳಿ ಆಗ ಸರ್ವ ಪ್ರಾಪ್ತಿಗಳ ಖಜಾನೆಯಿಂದ ಸಂಪನ್ನರಾಗಿ ಬಿಡುವಿರಿ.